ಇಂಗ್ಲಿಷ್ ಹಾಗೂ ಹಿಂದಿಯಲ್ಲಿ ದೂರದಲ್ಲೇ ನಿಂತು ಭಾಷಣ ಮಾಡಿದ. ಎಲ್ಲರೂ ತಮಗೆ ಅರ್ಥವಾದವರಂತೆ ಮುಖದಲ್ಲಿ ನಗು ಅರಳಿಸಿಕೊಂಡು ಚಪ್ಪಾಳೆ ಹೊಡೆದರು. ಲಾಟರಿ ಹೊಡೆದು ಬಹುಮಾನ ಗೆದ್ದ ಪುರಸ್ಕೃತರಲ್ಲವೇ ಎಂಬ ಹಮ್ಮು ಬಿಮ್ಮು ಎಲ್ಲ ಗಂಡಹೆಂಡಿರ ಮುಖದಲ್ಲೂ ಎದ್ದು ಕಾಣುತ್ತಿತ್ತು. ಎಲ್ಲ ಟೇಬಲ್ಲಿನಲ್ಲೂ ಸರ್ವಾಲಂಕೃತ ಪತ್ನೀ ಸಮೇತರಾಗಿ ಬಂದು ಕೂತ ದಂಪತಿಗಳು. ಸುತ್ತಲೂ ಝಗಮಗಿಸುವ ವಿದ್ಯುದ್ದೀಪಗಳ ಬೆಳಕು. ಹೊರಗೆ ಕತ್ತಲೆ ಆವರಿಸಿದ್ದೇ ಮಂಜುಳೆಗೆ ತಿಳಿಯಲಿಲ್ಲ. ವಿಶ್ವನಾಥ ಪದೇ ಪದೇ ತನ್ನ ಪುಟ್ಟ ಮೊಬೈಲನ್ನು ಶರ್ಟಿನ ಜೇಬಿನಿಂದ ತೆಗೆದು ಸಮಯ ನೋಡುತ್ತಿದ್ದ. ತಮ್ಮ ನಿಯಮಗಳನ್ನು ಕಾಮನ್ ಆಗಿ ಎಲ್ಲರಿಗೂ ಹೇಳಿ ಮುಗಿದ ನಂತರ ಎಲ್ಲ ದಂಪತಿಗಳ ಟೇಬಲ್ಲಿಗೂ ಒಬ್ಬೊಬ್ಬರು ಸಮವಸ್ತ್ರ ತೊಟ್ಟ ಯುವಕರು ನಡೆದು ಬಂದರು. ಆ ಯುವಕರ ಹಿಂದೆಯೇ ಹಬೆಯಾಡುವ ಇನ್‌ಸ್ಟಂಟ್ ಕಾಫಿ ಬಂತು. ವಿಶ್ವನಾಥ ಕಾಫಿ ಹೀರುತ್ತ 'ಇದೇನು ಕಾಫಿ ಸಿಸ್ಟೆಮ್ ನಿಮ್ಮದು? ಈ ಕಡೆಯೆಲ್ಲ ನಾವು ಚಹದವರು' ಅಂತೇನೋ ಮಾತಿಗಿಳಿದಿದ್ದ.

'ಹಾಯ್, ನಮಸ್ಕಾರ' ಎನ್ನುತ್ತ ಮಂಜುಳೆಯ ಟೇಬಲ್ಲಿಗೆ ಬಂದು ವಿನಯಶೀಲನಾಗಿ ಕೈಕುಲುಕಿ ಎದುರು ಕುರ್ಚಿಯಲ್ಲಿ ಆಗಲೇ ಆಸೀನನಾಗಿದ್ದ ಯುವಕ ತನ್ನ ಹೆಸರು ಚೇತನ್ ಎಂದು ಪರಿಚಯಿಸಿಕೊಂಡಿದ್ದ. ವಿಶ್ವನಾಥನ ಕಾಫಿ ಮತ್ತು ಚಹದ ವಿಷಯವನ್ನು ಅವನು ಕೇಳಿಸದಂತೆ ನಟಿಸಿದ. ಇವರೂ 'ಹಾಯ್ ಹೆಲೋ' ಹೇಳಿ ಹಲ್ಲು ಗಿಂಜುತ್ತ ಆ ಹುಡುಗನ ಜೊತೆ ಆಪ್ತ ಸಮಾಲೋಚನೆಯಲ್ಲಿ ತೊಡಗಿದರು. ವಿಶ್ವನಾಥ 'ನೀವು ಇಲ್ಲಿ ಎಷ್ಟು ವರ್ಷದಿಂದ ಕೆಲಸಕ್ಕಿದ್ದೀರಿ? ಎಷ್ಟು ಸಂಬಳ ಕೊಡುತ್ತಾರೆ? ನಿಮ್ಮ ಮನೆಯೆಲ್ಲಿ? ನೀವು ಕಲಿತದ್ದೆಷ್ಟು?' ಅಂತೆಲ್ಲ ಆ ಹುಡುಗನ ಪೂರ್ವಾಪರ ವಿಚಾರಿಸಿಕೊಳ್ಳತೊಡಗಿದ್ದೇ ಚೇತನ ಇದ್ದಲ್ಲೇ ಚೇತರಿಸಿಕೊಂಡು, 'ಓಕೆ ಇಲ್ಲಿ ನನ್ನದು ಮುಖ್ಯವಲ್ಲ, ಈವತ್ತು ನೀವು ನಮ್ಮ ಗೆಸ್ಟ್, ನಿಮ್ಮ ಬಗ್ಗೆ ಹೇಳಿ' ಅನ್ನುತ್ತ ಟೈ ಸರಿ ಮಾಡಿಕೊಳ್ಳುತ್ತ ನೆಟ್ಟಗೆ ಕೂತು ಬೇರೆ ವಿಷಯ ತೆಗೆದು ವಿಚಾರಣೆಗೆ ಸಿದ್ಧಗೊಂಡಿದ್ದ. ಆ ಯುವಕನ ಹಣೆಯಲ್ಲಿ ಜಾರಿ ಬೀಳುತ್ತಿದ್ದ ತಲೆಗೂದಲು ಆತ ಮೇಲೆ ಮಾಡಿಕೊಂಡ ತಕ್ಷಣ ಪುನಃ ಅಲ್ಲೇ ಬೀಳುತ್ತಿತ್ತು. 'ನೋಡಿ ಸಾರ್, ನೀವು ಹುಟ್ಟಿ ಬೆಳೆದದ್ದು ಎಲ್ಲೋ, ನಾನು ಹುಟ್ಟಿ ಬೆಳೆದದ್ದು ಎಲ್ಲೋ, ಆದರೂ ಈಗ ನಾವು ಒಬ್ಬರಿಗೊಬ್ಬರು ಆತ್ಮೀಯರಾಗಿದ್ದೇವೆ, ಇವೆಲ್ಲ ಋಣಾನುಬಂಧ' ಎಂದ ಹುಡುಗ ತನ್ನ ವಯಸ್ಸಿಗೆ ಮೀರಿದ ಮಾತಾಡುತ್ತಿದ್ದಾನೆ ಅನ್ನಿಸಿತು ವಿಶ್ವನಾಥನಿಗೆ.

ವಿಶ್ವನಾಥ ತನ್ನ ನೌಕರಿಯ ಸಂಗತಿ, ಮನೆಯಲ್ಲಿರುವ ನಾಲ್ಕನೇ ಕ್ಲಾಸಿನಲ್ಲಿ ಓದುತ್ತಿರುವ ಹತ್ತು ವರ್ಷದ ಮಗ ಆಕಾಶ್‌ನ ಕುರಿತು, ಹೆಂಡತಿ ಮನೆಯಲ್ಲಿ ಪ್ರೈಮರಿ ಮಕ್ಕಳಿಗೆ ಟ್ಯೂಷನ್ ಹೇಳುವ ವಿಷಯವೆಲ್ಲವನ್ನೂ ಹೇಳುತ್ತ ತಾವಿನ್ನೂ ಬಾಡಿಗೆ ಮನೆಯಲ್ಲಿದ್ದು ಒಂದು ಸರಿಯಾದ ಅಪಾರ್ಟ್‌ಮೆಂಟಿನ ಸಿಂಗಲ್ ಬೆಡ್ ರೂಂ ಕಿಚನ್ ಹೊಂದಿದ ಮನೆಯೊಂದನ್ನು ಹುಡುಕುತ್ತಿರುವುದಾಗಿ ಹೇಳಿಬಿಟ್ಟಿದ್ದ. ಎದುರು ಕೂತ ಚೇತನ್‌ಗೆ ಇದ್ದಲ್ಲೇ ಜೀವ ಬಂದಂತಾಯಿತು. 'ನೀವು ಹೇಳುತ್ತಿರುವುದು ಸರಿ, ಮನುಷ್ಯನಾದವನಿಗೆ ಒಂದು ದೊಡ್ಡ ಕನಸಿರಬೇಕು, ಕನಸಿದ್ದರೆ ಬದುಕಿನಲ್ಲಿ ತುಂಬಾ ಮುಂದೆ ಬರಬಹುದು, ನಿಮ್ಮ ಕನಸುಗಳನ್ನು ಸಾಕಾರ ಮಾಡಲಿಕ್ಕಾಗಿಯೇ ನಮ್ಮ ಕಂಪೆನಿ ಹಗಲೂ ರಾತ್ರಿ ದುಡಿಯುತ್ತಿದೆ' 'ಓಹೋ, ನಿಮ್ಮ ಕಂಪೆನಿಯ ಮೂಲ ಊರು ಯಾವುದು?' 'ಬೆಂಗಳೂರು ಸಾರ್. ಇಲ್ಲಿ ಈ ಶಾಖೆ ಶುರುವಾಗಿ ಒಂದು ವರ್ಷ ಆಯ್ತು' ಎಂದ. ವಿಶ್ವನಾಥ ಮಂಜುಳೆ ದಂಪತಿ ಮಂತ್ರಮುಗ್ಧರಾಗಿ ಕೇಳಿದರು.